ಇ) ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಸಕ್ಕರೆ ತಾಂತ್ರಿಕ ಶಾಖೆಯನ್ನು ಪ್ರಾರಂಭಿಸಲು ಕೈಗೊಂಡಿರುವ ಕ್ರಮವೇನು ?

ಶ್ರೀ ಆರ್. ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಒಂದು.

ಆ) ಪ್ರತಿ ಟನ್ನಿಗೆ ೧ ರೂ. ನಂತೆ ಸಂಕೇಶ್ವರ ಸಕ್ಕರೆ ಕಾರ್ಖಾನೆಯವರು ವಸೂಲಿ ಮಾಡಿರುವುದಾಗಿ ತಿಳಿದು ಬಂದಿದೆ.

ಇ) ಸಂಕೇಶ್ವರದಲ್ಲಿ ಕಬ್ಬು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಪ್ರಸ್ತಾವನೆಯನ್ನು ಐ.ಸಿ.ಎ.ಆರ್. ನವದೆಹಲಿ ಇವರಿಗೆ ಕಳುಹಿಸಲಾಗಿದೆ. ಮತ್ತು ಅವರಿಂದ ಉತ್ತರ ನಿರೀಕ್ಷಿಸಲಾಗಿದೆ.

ಸೇತುವೆಗಳನ್ನು ಕಟ್ಟುವುದು

೧೬೨೧. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಕಂದಾಯ, ಯೋಜನೆ ಮತ್ತು ಭಾರಿ ಹಾಗೂ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿರುವ ಪ್ರಮುಖ ನದಿಗಳ ಮೇಲೆ ಕಟ್ಟಿರುವ ಸೇತುವೆಗಳ ಸಂಖ್ಯೆ ಎಷ್ಟು ?

ಆ) ಸದರೀ ಸೇತುವೆಗಳನ್ನು ಕಟ್ಟಲು ಸರ್ಕಾರದವರು ಇದು ವರೆಗೆ ಖರ್ಚು ಮಾಡಿರುವ ಹಣವೆಷ್ಟು ?

ಇ) ಆ ಪೈಕಿ ಅಪೂರ್ಣಗೊಂಡಿರುವ ಸೇತುವೆಗಳೆಷ್ಟು, ಮತ್ತು ಯಾವಾಗ ಪೂರ್ಣಗೊಳಿಸಲಾಗುವುದು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ೧೯೮೫-೮೬ ರಿಂದ ೧೯೮೭-೮೮ರ ಕೊನೆಯ ವರೆಗೆ ರಾಜ್ಯದಲ್ಲಿರುವ ಪ್ರಮುಖ ನದಿಗಳ ಮೇಲೆ ಪೂರ್ಣಗೊಂಡಿರುವ ಸೇತುವೆಗಳ ಸಂಖ್ಯೆ ೫,

ಆ) ೨೧೪.೨೪ ಲಕ್ಷ ರೂಪಾಯಿಗಳು.

ಇ) ಮೇಲೆ ತಿಳಿಸಿರುವ ಸೇತುವೆಗಳಲ್ಲದೆ, ಪ್ರಮುಖ ನದಿಗಳ ಮೇಲೆ ಇನ್ನೂ ೧೫ ಸೇತುವೆ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿವೆ. ಇವುಗಳನ್ನು ಹಣ ಲಭ್ಯತೆಯನ್ನಾಧರಿಸಿ, ಆದಷ್ಟು ಬೇಗ ಪೂರ್ಣಗೊಳಿಸಲಾಗುವುದು.

ಒಳನಾಡು ವಿಮಾನ ಅಭಿವೃದ್ಧಿ ಬಗ್ಗೆ

೧೫೮೬. ಶ್ರೀ ಡಿ.ಟಿ. ಜಯಕುಮಾರ್ (ನಂಜನಗೂಡು).—ಮಾನ್ಯ ಬಂದರು ಹಾಗೂ ವಿಮಾನ ಗಾರಿಕೆ ಮಂತ್ರಿ ಸಣ್ಣ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಒಳನಾಡು ವಿಮಾನಂಗಾರಿಕೆ ಅಭಿವೃದ್ಧಿ ನಿಗಮ ಇದುವರೆಗೆ ಎಷ್ಟು ಹಣವನ್ನು ಖರ್ಚು ಮಾಡಿದೆ ?

ಆ) ಎಲ್ಲೆಲ್ಲಿ ಈ ನಿಗಮವು ತನ್ನ ಕಾರ್ಯವನ್ನು ನಡೆಸುತ್ತಿದೆ ?

ಇ) ೧೯೮೭-೮೮ನೇ ಸಾಲಿನಲ್ಲಿ ಉತ್ಪಾದನೆ ಮಾಡಿದ ವಿಮಾನ ಪ್ರಮಾಣವೆಷ್ಟು ? ಹಾಗೂ ಬಂದ ಲಾಭವೆಷ್ಟು ?

ಶ್ರೀ ಎಂ. ರಘುಪತಿ (ವಿಮಾನಂಗಾರಿಕೆ ಮತ್ತು ಬಂದರು ಸಚಿವರು).—

ಅ) ೧೨೦-೩೨ ಲಕ್ಷ ರೂಪಾಯಿಗಳು.